DOC-465
T-P-2

Reg No 3 C 155 17 — 4 —72

55 th Year of Publication ★★ Satyavadi Daily, Mysore 4

In the State – The First
Golden Jubilee
Celebrated Paper
★
News, Views, Dharmic
Moral Ethical Matters



ರಾಷ್ಟ್ರಭಕ್ತಿ ಪ್ರಥಮ
ಸ್ವಚ್ಛ ಕಾಂಗ್ರೆಸ್
ಮಹೋನ್ನತವಾದ
ಸರವೇರಿಸಿದ
ದಕ್ಷಿಣಕೆ

ವ್ಯವಸ್ಥಾಪಕರು ಆರ್ಮನೆ ಎಂಸ್ಟ್ರದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ ಎಸ್. ಕೃಷ್ಣರಾವ್ [2 ಪೈಸೆ

ಜಾಗ್ರತೆಯಿಂದ ಇರುವಂತೆ ಬಂಗ್ಲಾ ಸೇನೆಗೆ ಆಜ್ಞೆ

ಓವರ್‌ಡ್ರಾಫ್ಟ್

ನಾರ್ವೆ ತಿಜೋರಿಯು 21 ಕೋಟಿ ರಾಜ್ಯ ಗಳು ವಿದೇಶ ಬ್ಯಾಂಕೆನ್ಲಲ್ಲಿ ರೂ. ನಾನೂರು ಮಿಲಿಯ ಕೋಟಿ ಎಷ್ಟೆಂತ್ತಿಬಹುತ್ತ ಲಕ್ಷ ರೂಪಾಯಿಗಳು ಓವರ್‌ಡ್ರಾಫ್ಟ್ ಹೊಂದಿದ್ದವು ಮೈಸೂರಿನದು ಪ್ಪತ್ತೆಂಟೊಂಬತ್ತು ಕೋಟಿ ಆರು ಲಕ್ಷ ರೂಪಾಯಿಗಳೆಂದು ನವ ದೆಹಲಿ ವಾರ್ತೆ.

★

ಪ್ರಸಿದ್ಧರ ಆತ್ಮಹತ್ಯೆ

ಸೊಬೆಲ್ ಪ್ರಶಸ್ತಿ ಪಡೆದಿದ್ದ ಜಪಾನು ಕಾದಂಬರಿಗಾರ ಯಸುನಾರಿ ಕವಾಬಾಟರು ಜುಷಿ ನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡರೆಂದು ಪೋಲೀಸರು ವರದಿ ಮಾಡಿರುವುದಾಗಿ ಟೋಕಿಯೋ ವಾರ್ತೆ ತಿಳಿಸುತ್ತದೆ.

○ಕೋಚೆಸ್ಟರ್— ಅತಿ ವೇಗವಾಗಿ ಮೋಟಾರು ನಡೆಸಿದ ಥಮನುಸ್ ಟೈಟ್ ಎಂಬ ಯುವಕನಿಗೆ 48 ಗಂಟೆ ಕಾಲ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವ ಶಿಕ್ಷೆ ವಿಧಿಸಲಾಯಿತು.

ಭಾರತಕ್ಕೆ

ಭಾರತಕ್ಕೆ ಹನ್ನೆರಡು ದಿನಗಳ ಭೇಟಿಗಾಗಿ ಹೊರಟ ನೇಪಾಳ ಪ್ರಧಾನಿ ಶ್ರೀ ಕೀರ್ತಿನಿಧಿ ಬಿಸ್ಟಾರವರು ಭಾರತದೊಡನೆ ಮತ್ತೆ ವಿಶೇಷ ಒಡಂಬಡಿಕೆಯ ಅವಶ್ಯಕತೆ ಇಲ್ಲವೆಂದು ಹೇಳಿದರು. ಭಾರತದಿಂದ ನೇಪಾಳಕ್ಕೆ ತುಂಬಾ ಸಹಾಯ ದೊರೆಯುತ್ತಲೇ ಇರುವುದೆಂದರು.

★

ಪೋಲೀಸು ವ್ಯಾಪ್ತಿಗೆ ಇರಿತ

ರಾಂಚಿಯಿಂದ ಬಂದಿರುವ ವರದಿಯ ಪ್ರಕಾರ, ಒಬ್ಬ ಪೋಲೀಸು ವ್ಯಾಪ್ತಿಯನ್ನ ಚೂರಿಯಿಂದ ತಿವಿದು ನ್ಯಾಯಾಲಯ ಕಸ್ಟಡಿಯಿಂದ ವಿಚಾರಣೆಗೊಳಗಾಗಿದ್ದ 7 ಮಂದಿ ಖೈದಿಗಳು ಓಡಿದರು ಇಬ್ಬರು ಮತ್ತೆ ಸಿಕ್ಕಿದರು

★

ಬೆಂಗಳೂರು— ಶನಿವಾರ ಮುಗಿಯಬೇಕಾಗಿದ್ದ ಶಾಸನಸಭಾಧೀನೇಶನದ ಅವಧಿಯು ಬುಧವಾರದವರಿಗೆ ಹೆಚ್ಚಿಸಲಾಗಿದೆ

ಗೋರಿ ಮೇಲಿನ ಹಕ್ಕುಬಾಧ್ಯತೆ

ಪಶ್ಚಿಮ ಜರ್ಮನಿಯ ಆರ್ಬೆಬರ್ಗ್‌ನಲ್ಲಿಯ ಸ್ಮಶಾನದಲ್ಲಿ ಒಬ್ಬನ ಗೋರಿ. ಅವನಿಗೆ ಒಬ್ಬ ಹೆಂಡತಿ ಮತ್ತು 6 ಮಕ್ಕಳು ಇದಾರೆ; ಮತ್ತು ಅವನಿಗೆ ನ್ಯಾಯಬಾಹಿರವಾಗಿ ಹುಟ್ಟಿದ 6 ವರ್ಷದ ಹುಡುಗಿ ಇದ್ದಾಳೆ. ಆ ಗೋರಿಯನ್ನು ಈ ಹುಡುಗಿ ಮುಟ್ಟಲು ಅವನ ಹೆಂಡತಿಮಕ್ಕಳು ಅವಕಾಶ ಕೊಡುತ್ತಿಲ್ಲ ಈ ಬಗ್ಗೆ ಸ್ಥಳೀಯ ನ್ಯಾಯಾಸ್ಥಾನದಲ್ಲಿ ನೊಖದ್ದವೆ ಹೂಡಲಾಯಿತು : ಜಡ್ಜರು ತೀರ್ಪಿನಲ್ಲಿ ಆ ಹುಡುಗಿಗೆ ಮತ್ತು ಅವಳ ತಾಯಿಗೆ ಒಂದು ಕಡೆಯಲ್ಲಿ ಗೋರಿಯ ಎಂಟನೇ ಒಂದು ಭಾಗ ಅಂದರೆ 47 5 x 45 ಸೆಂಟಿಮಿಟರು ಬಿಟ್ಟುಕೊಡಲು ಆಜ್ಞೆ ನೀಡಿ ಸ್ಮಶಾನದ ಕಾವೆಲುಗಾರನು ಈ ಭಾಗ ಗುರ್ತಿಸುವಂತೆ ಕಲ್ಲು ನೆಡಲು ಸೂಚಿಸಿದರು. ಮತ್ತು ಈ ಬಗ್ಗೆ ಎನಾದರೂ ವ್ಯಾಜ್ಯ ಬಂದರೆ ಜೈಲು ಶಿಕ್ಷೆ ವಿಧಿಸುವುದಾಗಿ ಎಚ್ಚರಿಕೆ ಕೊಟ್ಟಿರುವರು.

★

ದಿವ್ಯವಾಣಿ

ಕೊಳ್ಳುವನನಿಗೆ ನೂರು ಕಣ್ಣು ಜೇಕು, ಮಾರುವನನಿಗೆ ಒಂದೂ ಬೇಡ.
— ಜಾರ್ಜ್ ಹರ್ಬರ್ಟ್

ಯಾತಕ್ಕೂ ಹೆದರದ ಮನುಷ್ಯನು, ಪ್ರತಿಯೊಬ್ಬರಿಗೂ ಹೆದರುವ ಮನುಷ್ಯನಿಗಿಂತ ಕಡಮೆ ಶಕ್ತಿವಂತನಲ್ಲ
— ಶಿಲ್ಲರ್

ಶ್ರೀ ಅನಂತನರಸಿಂಹಯ್ಯಂಗಾರ್ಯರ ನಿಧನ

ಹೊಂಗನೂರಿನ ಶ್ರೀ ಅನಂತನರಸಿಂಹಯ್ಯಂಗಾರ್ಯರವರು ಹಠಾತ್ತನೆ ಶುಕ್ರವಾರ ರಾತ್ರೆ ನಿಧನರಾದರೆಂಬ ವಿಷಯವನ್ನು ಪ್ರಕಟಿಸಲು ತುಂಬಾ ವಿಷಾದಿಸುತ್ತೇವೆ. "ಶಾಸ್ತ್ರಧರ್ಮ ನಿರತ" ರಾದ ಅವರು, ವಿದ್ಯಾವಿನಯಸಂಪನ್ನರೂ, ಜನಾನುರಾಗಿಗಳೂ, ಶಾಸ್ತ್ರಧರ್ಮ ಪ್ರಚಾರಮಗ್ನರೂ ಆಗಿದ್ದರು. "ಸತ್ಯವಾದಿ" ಹಿತೈಷಿಗಳೂ 'ಗೋರಕ್ಷಣ"ಕ್ಕೆ ಜೀವನಾಡಿಯಂತೆಯೂ ಇದ್ದರು ಅವರ ನಿಧನವು ನಮಗೆ ತುಂಬಾ ವ್ಯಸನವುಂಟುಮಾಡಿದೆ. ಭಗವಂತನೆ ಅವರ ಆತ್ಮಕ್ಕೆ ಶಾಂತಿ ದಯಪಾಲಿಸಲೆಂದೂ, ಅವರು ಬಂಧುಬಳಗದವರು ದುಃಖ ಸಹಿಸಲು ಶಕ್ತಿ ಕರುಣಿಸಲೆಂದೂ ಪ್ರಾರ್ಥಿಸುತ್ತೇವೆ.

ವ್ಯವಸಾಯ ವಿದ್ಯಾಲಯ

ಬೊಂಬಾಯಿನ ಮರಾಠವಾಡಾ ಭಾಗದಲ್ಲಿ ಜಾನಿನಿಂದ ವ್ಯವಸಾಯ ವಿಶ್ವವಿದ್ಯಾಸಿಲಯದ ಮೂಲವನ್ನು ಸ್ಥಾಪನೆ ಮಾಡಕಾಗುವುದೆಂದು ಮುಖ್ಯ ಮಂತ್ರಿ ನಾಯಕರು ತಿಳಿಸಿರುವರು

○

3 ನೇ ಬಾರಿ ಪಾರಿತೋಷಕ

ಪತ್ರಿಕೆಗಳ ಉತ್ತಮ ಮುದ್ರಣ ಮುಕ್ತ ವಿನ್ಯಾಸಕ್ಕಾಗಿ ಸರ್ಕಾರದ ಪಾರಿತೋಷಕಗಳು ಬೊಂಬಾಯಿನ ಇಂಡಿಯನ್ ಎಕ್ಸ್‌ಪ್ರೆಸ್‌ಗೆ 2 ನೇ ಬಹುಮಾನ ದೊರೆತಿದೆ. ಮಣಿಪಾಲದ ಉದಯವಾಣಿ ಕನ್ನಡ ದಿನ ಪತ್ರಿಕೆಗೆ ಮೊದಲನೆಯ ಬಹುಮಾನ ದೊರೆತಿದೆ ಎಂದು ನವ ದೆಹಲಿ ವಾರ್ತೆ.

★

ಈ ವರ್ಷ ಫೆಬ್ರವರಿ ಕಡೆಯ ವರೆಗೆ ಹನ್ನೊಂದು ತಿಂಗಳಲ್ಲಿ ಎಂಟನೂರುನಾಲ್ಕು ರೈಲ್ವೆ ಅಪಘಾತಗಳು ನಡೆದಿವೆ ಎಂದು ನವ ದೆಹಲಿ ವಾರ್ತೆ ತಿಳಿಸಿದೆ.

ಸೇನೆಗೆ ಆಜ್ಞೆ

ಡಾಕ್ಕಾದಿಂದ ಬಂದಿರುವ ವಾರ್ತೆಯ ಪ್ರಕಾರ, ಭಾರತದ ಗಡಿ ಭಾಗಗಳಿಗೆ ಆಯುಧ ಅಶ್ವಮ ಸಾಗಾಣಿಕೆ ಮತ್ತು ಅತಿಕ್ರಮವಾಗಿ ಬರದಂತೆ ಬಂಗ್ಲಾ ದೇಶದ ತುಪಾಕಿ ಸೇನೆ ಭಾರತದೊಡನೆ ಪೂರ್ತಿ ಗಡಿ ರೇಖೆಯಲ್ಲಿ ಎಚ್ಚರಿಕೆಯಿಂದ ಇರಲು ಆಜ್ಞೆಯನ್ನು ಮಾಡಲಾಗಿದೆ.

●

ಬೆಂಗಳೂರಿಗೆ ಬಹುಮಾನ

ಮೂವತ್ತಮೂರನೇ ರಾಜ್ಯ ಲಾಟರಿ ಡ್ರಾ ಬೆಳಗಾಂನಲ್ಲಿ ಭಾನುವಾರ ನಡೆಯಿತು ರೆಹಾನಾ ಸುಲ್ತಾನ ಡ್ರಾ ತೆಗೆದರು ಬೆಂಗಳೂರಿನ ಟಿಕೇಟಿಗೆ ಬೂಪರ್ ಬಹುಮಾನ ೮ ಲಕ್ಷ ರೂ ದೊರೆಯಿತು.

●

ಭಾರತೀಯನ ಅಪಹರಣ

ಅಗರ್ತಾಲದ ವಾರ್ತೆಯಂತೆ: ಭಾರತ ಹಾಗೂ ಬಾಂಗ್ಲ ದೇಶದ ಗಡಿ ಭಾಗದ ಆರುಂಧತಿ ನಗರದಲ್ಲಿ 2 ಕಡೆಯ ಜನರಲ್ಲಿ ಭೂಮಿ ವ್ಯಾಜ್ಯ ಹುಟ್ಟಿ ಭಾರಿ ಘರ್ಷಣೆ ಆಗಿ ಈರ್ವರು ಮರಣಹೊಂದಿ ಹಲವಾರು ಜನ ಗಾಯಗೊಂಡರು ಬಾಂಗ್ಲಾದ ಹಳ್ಳಿಯವರು ಭಾರತೀಯನ ಅಪಹರಣಮಾಡಿರುವರು.

○

ಗಿರಣಿ ಮುಚ್ಚಿಕೆ

ಹೆಚ್ಚು ವಿದ್ಯುತ್ ಅಭಾವದಿಂದ ಗುಜರಾತಿನ 62 ಆರಿವೆ ಗಿರಣಿಗಳಲ್ಲಿ 51 ಮುಚ್ಚಲ್ಪಟ್ಟವು ಇತರ 69 ಕಾರ್ಖಾನೆಗಳು ಮುಚ್ಚಲ್ಪಟ್ಟವೆ.

●

ಮೈಸೂರು — ರಾಷ್ಟ್ರೀಯ ಯೋಜನೆಗೆ, ಮೈಸೂರು ಜಿಲ್ಲೆಯು 71–72 ಸಾಲಿನಲ್ಲಿ ಪ್ರಥಮ ಬಾರಿಗೆ ಒಟ್ಟು 1 ಕೋಟಿ 14 ಲಕ್ಷ ರೂಗಳನ್ನು ಹಾಗೂ ನಿಷ್ಪಳ 33 ಲಕ್ಷ ರೂಗಳನ್ನೂ ಶೇಖರಿಸಿ ಗುರಿಯನ್ನು ಸಾಧಿಸಿದೆ

ಧಾಡಿ ಪುರಾಣ

★

ಇತಿಹಾಸ ಪ್ರಸಿದ್ಧ ಮುಮ್ಮಡಿ ಕೃಷ್ಣರಾಜ ಒಡೆಯರಂತೆ ಮಿಾಸೆ ಯಿರುವ ಕಾಲ್ದಳ ಈಗಲೂ ಮೈಸೂರಿನ ಅರಮನೆಯಲ್ಲಿದೆ.

ಫಾರ್ಸಿಗಳು ಸುಂದರ ಒಡವೆಗಳಿಂದ ಗಡ್ಡವನ್ನು ಸಿಂಗರಿಸಿಕೊಳ್ಳುತ್ತಿದ್ದರೆ, ತುರ್ಕಿಯವರು ಪರಿಮಳ ದ್ರವ್ಯಗಳನ್ನೂ, ಅರೇಬಿಯನ್ನರು ಮಿರುಗುವ ಕೆಂಪನ್ನೂ ದಾಡಿಗೆ ಹಚ್ಚಿಕೊಳ್ಳುತ್ತಿದ್ದರು. ಸಿಕ್ಖರು ಗಡ್ಡ ಬೋಳಿಸುವುದಕ್ಕೆ ಸಂಪೃತಿಯಂ ನಿಷೇಧವಿದೆ ; ಗಡ್ಡವನ್ನು ಅವರು ನೀಟುವಾಗಿ ಜೋಡಿಸಿ, ಪರಿಮಳ ದ್ರವ್ಯ ಹಚ್ಚಿ ತಲಗೆ ಸುತ್ತಿ, ಪಗಡಿ ಧರಿಸುತ್ತಾರೆ ; ಇಂಗ್ಲೆಂಡ್ ಪೋಲೀಸು ಪಡೆಯಲ್ಲಿರುವ ಸಿಕ್ ಅರ್ಜುನಸಿಂಗ್ ತಾನು ಧಾಡಿ ಧರಿಸಲು ಅಲ್ಲಿ ವಿಶೇಷ ಪರವಾನಿಗಿ ಪಡೆದಿರುವನು.

ನಾಲ್ಕು ಸಾವಿರ ವರ್ಷ ಪ್ರಾಚೀನವಾದ ಈ ಧಾಡಿ ಮಿಾಸೆಯ ಇತಿಹಾಸಕಾರರಲ್ಲಿ ಕೊಡಗಿನ ಎಳನರು, ತಮಿಳಿನ ತೊಡಕ್ಕು ಎಡಗರು, ಒಳ್ಳಾರಿಯ ತೋಟ, ಕೋಯ ಕೊಡಮುನಿಯ, ಸನಿಯ ಮುಂತಾದ ಸಾಹಸಿಗಳು ಪ್ರಸಿದ್ಧರು ವಿಶ್ವದಲ್ಲೇ ಗಡ್ಡ ಮಿಾಸೆಯ ಜೆಳೆಗೆ ಅನರ್ಹ ಮುಖದವರು ಚೀನೀಯರು. ಮಿಾಸೆ ಇದ್ದರೆ ಮಾತಾಡು ಎಂಬ ಗಾದೆಯಂತೆ ಸ್ಟಾಲಿನ್ನನ ಮಿಾಸೆ ಕಮ್ಯುನಿಸ್ಟು ರಾಜ್ಯದ ಬಲವಾಗಿತ್ತು.

ಹಾಲು

ವಾಷಿಂಗ್ಟ್— ಹಾಲು ನಿಮ್ಮ ಮೂಳೆಗಳಿಗೆ ಒಳ್ಳೆಯದಾಗಿದ್ದರೂ, ಹೆಚ್ಚು ಸೇವನೆಯಿಂದ ಅದರ ಬೆಣ್ಣೆ ಕೊಬ್ಬು ಹೃದಯಕ್ಕೆ ತೊಂದರೆಯುಂಟುಮಾಡುವದೆಂದು ಡಾ॥ ಫ್ರಾನ್ಸಿಸ್ ಅಡನ್ಸ್ ಹೇಳಿರುವರು.

ಪುಡ'ಲಾಂಡ್' 14-4-72 ರಿಂದ ಅಮೋಘ 3ನೇ ವಾರ

ಪ್ರಗತಿ ಚಿತ್ರ ಇಂಟರ್ ನ್ಯಾಷನಲ್ ರವರ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ ಕುಮಾರ್, ನವೀನ್ ನಿಶ್ಚಲ್, ಪ್ರೇಮ್‌ನಾಥ್ ಬಾಲಿ, ಶತ್ರುಘ್ನ ಸಿನ್ಹಾ, ಪ್ರಾಣ್, ರೆಹಮಾನ್, ನಿರೂಪರಾಯ್ ಮುಂತಾದವರು

ಸಂಗೀತ – ರವಿ (ದಿನ 3 ಪ್ರದರ್ಶನಗಳು) ನಿರ್ದೇಶನ – ವೀರೇಂದ್ರಸಿನ್ಹಾ

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ನಾಂದಿ

ಅ ಪೆ ರಾ 14 4 72 ರಿಂದ

.... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವತ್, ಕಲ್ಪನಾ

ಸಂಗೀತ : ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ : ಗೀತಪ್ರಿಯ

Contribute Liberally

to the National Defence Fund

Help The Gorakshana

— Humanitari n Propoganda Monthly ....

Protect the Cow

Quality Printi & Neat Binding

Lakshminarasimha Press

Sivarampet. Mysorr

' ಮಾನವನು ಕೀಳು ಸೃಷ್ಟಿಯ ಧಣಿ, ಕ್ರೈಸ್ತ ನೆನ್ನುವುದು ಸೊಕ್ಕಿನ ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಜ್ಜಲು ಚಿತ್ರ

ಅ ನೆ – ಹು ಡು ಗ

ಹೊಸ ಕೀರ್ತಿಯ ಶಿಖರವಳಿಕೆ ಕೊಡುವ ಆಕರ್ಷಣೀಯ ಚಿತ್ರ

ಕುಟುಂಬ ಯೋಜನ

ದೇಶ ಹಿತಕ್ಕಾಗಿ

SHAKTI

SUDHA

A Superb Tonic

Edited Printedand Published by Dharmapracharanirata M S Krishna Rao (Proprietor) at the Satvavadi Press Chamarajapuram Mysore 4